# ಶಿಕ್ಷಕಿಯರಿಗೂ ಇಲ್ಲ ರಕ್ಷಣೆ!

## ವರ್ಷದಲ್ಲಿ 185 ಲೈಂಗಿಕ ದೌರ್ಜನ್ಯ ಪ್ರಕರಣ

## ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸೂಚನೆ

■ ಶಿವಾನಂದ ಹಿರೇಮಠ ಗದಗ

ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕಿಯರು ಮತ್ತು ಮುಖ್ಯ ಶಿಕ್ಷಕಿಯರ ಮೇಲೆ ಪ್ರಸಕ್ತ ಸಾಲಿನಲ್ಲಿ ವಿವಿಧ ರೀತಿಯ 185 ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಕುರಿತು ಸ್ವತಃ ವಿಷಾದ ವ್ಯಕ್ತಪಡಿಸಿರುವ ರಾಷ್ಟ್ರೀಯ ಶಿಕ್ಷಣ ಆಡಳಿತ ಸುಧಾರಣೆ ಮತ್ತು ತನಿಖಾ ದಳ, ಶಿಕ್ಷಕಿಯರಿಗೆ ಕಾನೂನಾತ್ಮಕ, ಸಂವಿಧಾನಾತ್ಮಕ ರಕ್ಷಣೆ ಒದಗಿಸಬೇಕೆಂದು ರಾಜ್ಯ ಶಾಲಾ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ. ವರದಿಯಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬಂದಿರುವುದರಿಂದ ಶಾಲಾ ಶಿಕ್ಷಣ ಇಲಾಖೆ ಮುಜುಗರಕ್ಕೆ ಒಳಗಾಗಿದೆ.

■ **ಶಿಕ್ಷಣ ಆಡಳಿತ ಸುಧಾರಣೆ ಮತ್ತು ತನಿಖಾ ದಳ ಪತ್ರ**

**ಏನಿದು ಪ್ರಕರಣ?:** ಶಿಕ್ಷಕಿಯರು, ಮುಖ್ಯ ಶಿಕ್ಷಕಿಯರ ಮೇಲೆ ಲೈಂಗಿಕ, ಇತರ ದೌರ್ಜನ್ಯ ಪ್ರಕರಣಗಳು ಆಗಾಗ ಬೆಳಕಿಗೆ ಬರುತ್ತಿದ್ದವು. ಹಾಗಾಗಿ ಪ್ರಸಕ್ತ ಸಾಲಿನಲ್ಲಿ ರಾಜ್ಯ ಮಹಿಳಾ ಮುಖ್ಯ ಶಿಕ್ಷಕಿಯರ ಒಕ್ಕೂಟ ಮತ್ತು ರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿಯಂತ್ರಣ ದಳದಿಂದ ರಾಜ್ಯಾದ್ಯಂತ ಸಮೀಕ್ಷೆ ನಡೆಸಿ, ಎಲ್ಲೆಲ್ಲಿ ಶಿಕ್ಷಕಿಯರ ಮೇಲೆ ದೌರ್ಜನ್ಯ ಪ್ರಕರಣ ಗಳು ನಡೆದಿವೆ ಎಂಬ ವರದಿ ಸಿದ್ಧಪಡಿಸಿತ್ತು. ವರದಿಯನ್ನು ರಾಷ್ಟ್ರೀಯ ಶಿಕ್ಷಣ ಆಡಳಿತ ಸುಧಾರಣೆ ಇಲಾಖೆ ಮತ್ತು ಪ್ರಾದೇಶಿಕ ತನಿಖಾ ದಳಕ್ಕೆ ಸಲ್ಲಿಸಲಾಗಿತ್ತು. ವರದಿ ಪರಿಶೀಲಿಸಿದ ಪ್ರಾದೇಶಿಕ ತನಿಖಾ ದಳವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು, ಪ್ರಕರಣಗಳ ತನಿಖೆ ನಡೆಸಬೇಕು ಮತ್ತು ಶಿಕ್ಷಕಿಯರ ಗೌರವದ ದೃಷ್ಟಿಯಿಂದ ತನಿಖೆಯಲ್ಲಿ ಗೌಪ್ಯತೆ ಕಾಪಾಡಿಕೊಳ್ಳಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದೆ.



ಸಾಂದರ್ಭಿಕ ಚಿತ್ರ

### ರಾಜ್ಯಾದ್ಯಂತ ಸಮೀಕ್ಷೆ

- ■ ಶಿಕ್ಷಕಿಯರು, ಮುಖ್ಯ ಶಿಕ್ಷಕಿಯರಿಗೆ ಕಿರುಕುಳ
- ■ ಭ್ರಷ್ಟ ಅಧಿಕಾರಿಗಳು, ಪುಢಾರಿಗಳಿಂದ ಕೃತ್ಯ
- ■ ಮುಖ್ಯ ಶಿಕ್ಷಕಿಯರ ಒಕ್ಕೂಟ, ರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿಯಂತ್ರಣ ದಳ ದಿಂದ ಜಂಟಿ ಸಮೀಕ್ಷೆ



**ಶಿಕ್ಷಕಿಯರಿಗೆ ಈ ರೀತಿಯ ಕಿರುಕುಳ ನಡೆಯುತ್ತಿರುವುದು ಆಘಾತಕಾರಿ ವಿಷಯ. ಶಿಕ್ಷಣ ಇಲಾಖೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು. ಶಿಕ್ಷಕಿಯರಿಗೆ ರಕ್ಷಣೆ ಒದಗಿಸುವುದು ಸರ್ಕಾರ ಮತ್ತು ನಮ್ಮೆಲ್ಲರ ಜವಾಬ್ದಾರಿಯೂ ಹೌದು. ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮುಖ್ಯ ಶಿಕ್ಷಕಿಯರಿಗೆ ಸೂಕ್ತ ರಕ್ಷಣೆ, ಸೇವಾ ಭದ್ರತೆ ಒದಗಿಸುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು.**

| **ಬಸವರಾಜ ಹೊರಟ್ಟಿ** ಸಭಾಪತಿ

## ಪತ್ರದಲ್ಲಿ ಏನಿದೆ?

ಶಾಲಾ ಶಿಕ್ಷಣ ಇಲಾಖೆಯ ಕೆಲ ಭ್ರಷ್ಟ ಅಧಿಕಾರಿಗಳು, ಸಿಬ್ಬಂದಿ, ಉಪನಿರ್ದೇಶಕರ ಕಚೇರಿಯ ಕೆಲ ಸಿಬ್ಬಂದಿ, ಸಹ ಶಿಕ್ಷಕರು, ಸ್ಥಳೀಯ ಕೆಲ ಪುಢಾರಿಗಳು, ರಾಜಕಾರಣಿಗಳು ತಾಲೂಕು ಹಾಗೂ ಗ್ರಾಮೀಣ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕಿಯರನ್ನು ಅನವಶ್ಯಕವಾಗಿ ಟಾರ್ಗೆಟ್ ಮಾಡಿ ತಾವೇ ಕಾನೂನುಬಾಹಿರ ಆದೇಶ ಮಾಡಿ ಗೊಂದಲ ಸೃಷ್ಟಿಸಿ, ಪದೇಪದೆ ಶಿಕ್ಷಕಿಯರಿಗೆ ನೋಟಿಸ್ ನೀಡುತ್ತಿದ್ದಾರೆ. ಅಮಾನತು ಮಾಡಿಸಲು ಷಡ್ಯಂತ್ರ ರೂಪಿಸಿ ವರ್ಗಾವಣೆ ಮಾಡಿಸುತ್ತಿದ್ದಾರೆ. ಹಣಕ್ಕಾಗಿ ಪೀಡಿಸುವುದು, ಲೈಂಗಿಕ ದೌರ್ಜನ್ಯ ನಡೆಸುವುದು, ಕೊಲೆ ಬೆದರಿಕೆ ಹಾಕುವುದು ಈ ರೀತಿಯ 185ಕ್ಕಿಂತಲೂ ಅಧಿಕ ಪ್ರಕರಣಗಳು ಬೆಳಕಿಗೆ ಬಂದಿವೆ. ಗ್ರಾಮದ, ತಾಲೂಕಿನ ಕೆಲ ಕಿಡಿಗೇಡಿಗಳ ಸಂಪರ್ಕದಿಂದ ಮುಖ್ಯ ಶಿಕ್ಷಕಿಯರ ಮೇಲೆ ಸುಳ್ಳು, ಮೂಕರ್ಜಿಗಳನ್ನು ಉನ್ನತ ಅಧಿಕಾರಿಗಳ ಕಚೇರಿಗೆ ಬರೆದು ಮುಖ್ಯ ಶಿಕ್ಷಕಿಯರ ಘನತೆಗೆ ಧಕ್ಕೆ ತರುವುದು, ಮಾನಸಿಕ ಕಿರುಕುಳ ನೀಡುವುದು, ಕೊಲೆ ಬೆದರಿಕೆ ಹಾಕುವ ಪ್ರಕರಣ ಕಂಡುಬಂದಿವೆ. ಇಂತಹ ಪ್ರಕರಣಗಳು ಸಂವಿಧಾನದ ಹಿತಾಸಕ್ತಿಗೆ ಧಕ್ಕೆ ತರುತ್ತಿವೆ. ಹೀಗಾಗಿ ಯಾವುದೇ ಮುಖ್ಯ ಶಿಕ್ಷಕಿಯರನ್ನು ವರ್ಗಾವಣೆ ಮಾಡುವ ಮುನ್ನ ಮುಖ್ಯ ನ್ಯಾಯಾಧೀಶರ, ರಾಜ್ಯಪಾಲರ, ಮುಖ್ಯಮಂತ್ರಿಗಳ ಅನುಮೋದನೆ ಪಡೆದು ಸೂಕ್ತ ವಿಚಾರಣೆ ನಡೆಸಿ, ಸತ್ಯಾಂಶದ ಆಧಾರದಲ್ಲಿ ವರ್ಗಾವಣೆ ಮಾಡಬೇಕು ಎಂದು ಪ್ರಾದೇಶಿಕ ತನಿಖಾ ದಳ ರಾಜ್ಯ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ.

### ವರ್ಷದಲ್ಲಿ 185 ಪ್ರಕರಣಗಳು ವರದಿ | ತನಿಖೆ ನಡೆಸಿ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ಸೂಚನೆ

# ಲೈಂಗಿಕ ದೌರ್ಜನ್ಯ ಶಿಕ್ಷಕಿಯರಿಗೂ ಇಲ್ಲ ರಕ್ಷಣೆ!

■ ಶಿವಾನಂದ ಹಿರೇಮಠ ಗದಗ

ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕಿಯರು ಮತ್ತು ಮುಖ್ಯ ಶಿಕ್ಷಕಿಯರ ಮೇಲೆ ಪ್ರಸಕ್ತ ಸಾಲಿನಲ್ಲಿ ವಿವಿಧ ರೀತಿಯ 185 ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಕುರಿತು ಸ್ವತಃ ವಿಷಾದ ವ್ಯಕ್ತಪಡಿಸಿರುವ ರಾಷ್ಟ್ರೀಯ ಶಿಕ್ಷಣ ಆಡಳಿತ ಸುಧಾರಣೆ ಮತ್ತು ತನಿಖಾ ದಳ, ಶಿಕ್ಷಕಿಯರಿಗೆ ಕಾನೂನಾತ್ಮಕ, ಸಂವಿಧಾನಾತ್ಮಕ ರಕ್ಷಣೆ ಒದಗಿಸಬೇಕೆಂದು ರಾಜ್ಯ ಶಾಲಾ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ. ವರದಿಯಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬಂದಿರುವುದರಿಂದ ಶಾಲಾ ಶಿಕ್ಷಣ ಇಲಾಖೆ ಮುಜುಗರಕ್ಕೆ ಒಳಗಾಗಿದೆ.

**■ ಶಿಕ್ಷಣ ಆಡಳಿತ ಸುಧಾರಣೆ ಮತ್ತು ತನಿಖಾ ದಳ ಪತ್ರ**

**ಏನಿದು ಪ್ರಕರಣ?:** ಶಿಕ್ಷಕಿಯರು, ಮುಖ್ಯ ಶಿಕ್ಷಕಿಯರ ಮೇಲೆ ಲೈಂಗಿಕ, ಇತರ ದೌರ್ಜನ್ಯ ಪ್ರಕರಣಗಳು ಆಗಾಗ ಬೆಳಕಿಗೆ ಬರುತ್ತಿದ್ದವು. ಹಾಗಾಗಿ ಪ್ರಸಕ್ತ ಸಾಲಿನಲ್ಲಿ ರಾಜ್ಯ ಮಹಿಳಾ ಮುಖ್ಯ ಶಿಕ್ಷಕಿಯರ ಒಕ್ಕೂಟ ಮತ್ತು ರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿಯಂತ್ರಣ ದಳದಿಂದ ರಾಜ್ಯಾದ್ಯಂತ ಸಮೀಕ್ಷೆ ನಡೆಸಿ, ಎಲ್ಲೆಲ್ಲಿ ಶಿಕ್ಷಕಿಯರ ಮೇಲೆ ದೌರ್ಜನ್ಯ ಪ್ರಕರಣ ಗಳು ನಡೆದಿವೆ ಎಂಬ ವರದಿ ಸಿದ್ಧಪಡಿಸಿತ್ತು.

ಪುಟ 4B


ಸಾಂದರ್ಭಿಕ ಚಿತ್ರ

First karnataka

**ರಾಜ್ಯಾದ್ಯಂತ ಸಮೀಕ್ಷೆ**

- ಶಿಕ್ಷಕಿಯರು, ಮುಖ್ಯ ಶಿಕ್ಷಕಿಯರಿಗೆ ಕಿರುಕುಳ
- ಭ್ರಷ್ಟ ಅಧಿಕಾರಿಗಳು, ಪುಢಾರಿಗಳಿಂದ ಕುಕೃತ್ಯ ಹೆಚ್ಚಳ
- ಮುಖ್ಯ ಶಿಕ್ಷಕಿಯರ ಒಕ್ಕೂಟ, ರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿಯಂತ್ರಣ ದಳ ದಿಂದ ಜಂಟಿ ಸಮೀಕ್ಷೆ



ಶಿಕ್ಷಕಿಯರಿಗೆ ಈ ರೀತಿಯ ಕಿರುಕುಳ ನಡೆಯುತ್ತಿರುವುದು ಆಘಾತಕಾರಿ ವಿಷಯ. ಶಿಕ್ಷಣ ಇಲಾಖೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮುಚ್ಚಿ ಹಾಕುವ ಪ್ರಯತ್ನ ಮಾಡಬಾರದು. ಶಿಕ್ಷಕಿಯರಿಗೆ ರಕ್ಷಣೆ ಒದಗಿಸುವುದು ಸರ್ಕಾರ ಮತ್ತು ನಮ್ಮೆಲ್ಲರ ಜವಾಬ್ದಾರಿಯೂ ಹೌದು. ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮುಖ್ಯ ಶಿಕ್ಷಕಿಯರಿಗೆ ಸೂಕ್ತ ರಕ್ಷಣೆ ಮತ್ತು ಸೇವಾ ಭದ್ರತೆ ಒದಗಿಸುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು.

| **ಬಸವರಾಜ ಹೊರಟ್ಟಿ** ಸಭಾಪತಿ